# ಶ್ರೀಮಾತೆಯವರೊಂದಿಗೆ ಮಾತುಕತೆ

ಬಂಗಾಳಿ ಮೂಲ : **ಸ್ವಾಮಿ ವಿಶುದ್ಧಾನಂದ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಶ್ರೀಮಾತೆಯವರನ್ನು ಕುರಿತು ಕೆಲವು ವಿಷಯಗಳನ್ನು ತಿಳಿಸುತ್ತೇನೆ. ಅವರನ್ನು ಎಷ್ಟರಮಟ್ಟಿಗೆ ತಿಳಿದಿರುವೆ? ಭಗವಾನ್ ಶಂಕರಾಚಾರ್ಯರು ತಮ್ಮ ಗೀತಾಭಾಷ್ಯದಲ್ಲಿ ಬರೆದಿದ್ದಾರೆ, ಅವತಾರಪುರುಷರೂ ಕೂಡ ಮಾನವರಂತೆಯೇ ಲೀಲೆಯನ್ನು ನಡೆಸುತ್ತಾರೆ ಎಂದು; ಆದರೆ ಅದರಿಂದ ಅವರಿಗೇನೋ ಲಾಭವಿದೆಯೆಂದಲ್ಲ, ಜಗತ್ತಿನ ಕಲ್ಯಾಣಕೋಸ್ಕರವೇ ಅವರು ಮನುಷ್ಯರಂತೆ ವರ್ತಿಸುತ್ತಾರೆ. ಲೋಕಹಿತಕ್ಕಾಗಿ ಅವರು ತಮ್ಮ ದೇಹದವರೆಗೂ ಸಮರ್ಪಣೆ ಮಾಡುತ್ತಾರೆ.

ಶ್ರೀರಾಮಕೃಷ್ಣರು ಆಮಂತ್ರಣವಿಲ್ಲದೆಯೇ ಕೇಶವಸೇನನ ಕಲುತೊಲಾ ನಿವಾಸಕ್ಕೆ ಭೇಟಿ ಕೊಟ್ಟಿದ್ದರು. ಅಂದು ಕೇಶವಸೇನ ಮನೆಯಲ್ಲಿರಲಿಲ್ಲ. ಮರುದಿನ ಶ್ರೀರಾಮಕೃಷ್ಣರು ಹೃದಯನೊಂದಿಗೆ ಅವನೊಂದಿಗೆ ಮಾತುಕತೆ ನಡೆಸಲು ಬೇಲ್‌ಘರಿಗೆ ಹೋಗಿದ್ದರು. ಕೇಶವನ ಮನೆಗೆ ಹೋಗಿ ಭೇಟಿ ಕೊಟ್ಟಿದ್ದರಲ್ಲಿ ಅವರ ಸ್ವಾರ್ಥ ಏನೂ ಇರಲಿಲ್ಲ; ಅವರು ಅಲ್ಲಿಗೆ ಹೋಗಿ ಬಂದುದು — ಆತನಿಗೆ ಏನನ್ನಾದರೂ ನೀಡುವುದಕ್ಕಾಗಿ. ಕೇಶವನಿಗೆ ಅನಾರೋಗ್ಯವಾಗಿದ್ದಾಗ ಶ್ರೀರಾಮಕೃಷ್ಣರು ಸಿದ್ಧೇಶ್ವರಿಗೆ ಎಳನೀರು, ಸಕ್ಕರೆ ಕೊಡುವುದಾಗಿ ಹರಕೆ ಹೊತ್ತಿದ್ದರು, ಸಾಮಾನ್ಯ ಜನರು ತಮ್ಮ ಆತ್ಮೀಯರಿಗೋಸ್ಕರ ಮಾಡುವಂತೆ. ಸ್ವಾಮಿ ವಿವೇಕಾನಂದರನ್ನು ಅವರು ಎಷ್ಟೊಂದು ಪ್ರೀತಿಸುತ್ತಿದ್ದರು! ಅವರ ಪ್ರೀತಿ ಅಹೇತುಕವಾಗಿರುತ್ತಿತ್ತು. ಯಾರು ಅಂಥ ಪ್ರೀತಿಯನ್ನು ಆಸ್ವಾದಿಸಿದ್ದಾರೋ, ಅವರ ಜೀವನದ ದಿಕ್ಕು ಬದಲಾಗಿತ್ತು. ಅದರ ಆಸ್ವಾದನೆಯ ರುಚಿಯನ್ನು ಮಾತಿನ ಮೂಲಕ ವರ್ಣಿಸಲು ಸಾಧ್ಯವಿಲ್ಲ. ಭಕ್ತಾಗ್ರಣಿಯಾದ ಗಿರೀಶ್ ಘೋಷ್ ನಮಗೆ ಹೀಗೆ ಹೇಳಿದ್ದರು: ''ಠಾಕೂರ್ (ಶ್ರೀರಾಮಕೃಷ್ಣರು) ನಮ್ಮನ್ನು ದೇವತೆಗಳನ್ನಾಗಿ ಮಾಡಿ ಹೋದರು. ಅದು ತಿರಸ್ಕಾರ ಅಥವಾ ಬೈಗುಳದ ಮೂಲಕ ಅಲ್ಲವಪ್ಪ, ಪ್ರೀತಿಯ ಮೂಲಕ.''

ನನ್ನ ಜೀವನದಲ್ಲಿ ಇಂಥ ಅಹೇತುಕ ಪ್ರೀತಿಯನ್ನು ನಾನು ಪಡೆದುದು ಶ್ರೀಮಾತೆಯವರಿಂದ. ಅವರ ಅಪಾರ ಪ್ರೀತಿಗೆ ಪಾತ್ರನಾಗುವ ಸೌಭಾಗ್ಯ ನನ್ನದಾಯಿತು. ಸಂಸಾರದಲ್ಲಿದ್ದಾಗ ತಾಯಿಗೆ ಒಬ್ಬನೇ ಮಗನಾಗಿದ್ದಾಗ ನನ್ನನ್ನು ಅತ್ಯಂತ ಆದರ, ಪ್ರೀತಿಗಳಿಂದ ಬೆಳೆಸಿದ್ದರು; ತಾಯಿಯ ಪ್ರೀತಿಯೇ ಎಲ್ಲಕ್ಕಿಂತಲೂ ಶ್ರೇಷ್ಠವಾದುದು ಎಂದು ಆಗ ನಾನು ಭಾವಿಸಿದ್ದೆ. ಶ್ರೀಮಾತೆಯವರ ಬಳಿಗೆ ಬಂದ ಮೇಲೆ ಆ ಪ್ರೀತಿ ಸಪ್ಪೆಯಾಗಿ ಕಂಡಿತು.



ನಾನು ಶ್ರೀಮಾತೆಯವರನ್ನು ಮೊದಲ ಬಾರಿ ಭೇಟಿಯಾದುದು ಜಯರಾಮಬಾಟಿಯಲ್ಲಿ. ಅದು ೧೯೦೫ ಅಥವಾ ೧೯೦೬ನೇ ಇಸವಿ. ನನಗೆ ಆಗ ಹನ್ನೆರಡು-ಹದಿಮೂರು ವರ್ಷ ವಯಸ್ಸು. ಕಲ್ಕತ್ತೆಯ ಹುಡುಗ; ಹಳ್ಳಿಯ ಕಡೆಗೆ ಬಂದಿದ್ದೆ. ಶ್ರೀಮಾತೆಯವರಿಗೆ ನನ್ನನ್ನು ಯಾರಾದರೂ ಪರಿಚಯಿಸಿ ಕೊಡಬೇಕಿತ್ತು ಎಂದು ಭಾವಿಸಿಕೊಂಡೆ. ಮನಸ್ಸಿನಲ್ಲಿ ಒಂದು ರೀತಿಯ ಸಂಕೋಚವುಂಟಾಗಿತ್ತು. ನಾನು ಅವರ ಮುಂದೆ ಹೋಗಿ ನಿಂತಾಗ, ಶ್ರೀಮಾತೆ ತರಕಾರಿ ಹೆಚ್ಚುತ್ತಿದ್ದರು. ನನ್ನನ್ನು ನೋಡಿದ ಅವರು ಕೇಳಿದರು, ''ಹೇಗಿದ್ದೀ ಮಗೂ? ಬರುವಾಗ ರಸ್ತೆಯಲ್ಲೇನೂ ತೊಂದರೆಯಾಗಿಲ್ಲ ತಾನೆ?'' ನಾನು ಅವರಿಗೆ ಸಂಪೂರ್ಣವಾಗಿ ಅಪರಿಚಿತನಾಗಿದ್ದೆ. ''ಹೇಗಿದ್ದೀ ಮಗೂ?'' ಇದೆಂಥ ಪ್ರಶ್ನೆ! ನನ್ನ ಇಡೀ ಜೀವನದಲ್ಲಿ ಅದೊಂದು ಸ್ಮರಣೀಯ ದಿನವಾಗಿದೆ. ಆ ದಿನವನ್ನು ನೆನಪಿಸಿಕೊಂಡರೆ ಇಂದಿಗೂ ನನಗೆ ಕಣ್ಣಲ್ಲಿ ನೀರು ಬರುತ್ತಿದೆ; ಅದನ್ನು ತಡೆಯಲಾಗುತ್ತಿಲ್ಲ. ಆಗ ನಾನು ಶ್ರೀಮಾತೆಯವರೊಂದಿಗೆ ಏಳು ದಿನಗಳನ್ನು ಕಳೆದಿದ್ದೆ.



ಸ್ವಾಮಿ ವಿಶುದ್ಧಾನಂದರು

ಅವರು ಅದೆಂಥ ಪ್ರೀತಿಯನ್ನು ನೀಡಿದರು! ಎಷ್ಟೊಂದು ಪ್ರೀತಿಯಿಂದ ಮಾತನಾಡಿಸಿದರು! ಅವರು ಕೂಡಲೇ ಭಾವಸಮಾಧಿಯನ್ನು ಕರುಣಿಸಲಿಲ್ಲ; ಬದಲಾಗಿ ಚಿರಕಾಲವೂ ಇರಲಿ ಎಂಬಂತೆ ನನ್ನನ್ನು ತಮ್ಮ ಮಗನನ್ನಾಗಿ ಸ್ವೀಕರಿಸಿದರು.

ಶ್ರೀಮಾತೆಯವರು ಒಂದು ದಿನ 'ಉದ್ಬೋಧನ'ದಲ್ಲಿ ಪೂರ್ವ ಬಂಗಾಳದ (ಬಾಂಗ್ಲಾದೇಶ) ಒಬ್ಬಳು ಹುಡುಗಿಗೆ ಮಂತ್ರ ದೀಕ್ಷೆ ನೀಡಿದರು. ದೀಕ್ಷೆಯ ನಂತರ ಅವರು ಅವಳೊಂದಿಗೆ ಕುಳಿತು ಆಹಾರ ಸ್ವೀಕರಿಸಿದರು. ಬಳಿಕ ಆ ಹುಡುಗಿಯ ಕೈಗೆ ಒಂದು ತಂಬಿಗೆಯಲ್ಲಿ ನೀರು ಕೊಟ್ಟು ಶ್ರೀಮಾತೆ ಹೇಳಿದರು, ''ನಿನ್ನ ಕೈ ತೊಳೆ.'' ಎಂದರು. ಆಕೆ ಕೈ ತೊಳೆದ ನಂತರ, ಇನ್ನೊಂದು ತಂಬಿಗೆ ನೀರು ಕೊಟ್ಟು, ''ನಿನ್ನ ಕಾಲು ತೊಳೆ'' ಎಂದರು. ಆ ಹುಡುಗಿ ಅಳತೊಡಗಿದಳು. ಶ್ರೀಮಾತೆಯವರು ಈ ರೀತಿ ಏಕೆ ಆದೇಶ ನೀಡಿದರು — ಎಂದಳು. ''ನೀನು ನನಗೆ ಏನಾಗಬೇಕು?'' ಎಂದರು ಶ್ರೀಮಾತೆ. ಆಕೆ ಉತ್ತರಿಸಿದಳು, ''ನಾನು ನಿಮ್ಮ ಮಗಳು.'' ಶ್ರೀಮಾತೆ, ''ಹಾಗಿದ್ದರೆ ನಾನು ಹೇಳಿದ ಹಾಗೆ ಮಾಡು. ಈಗ ಕಾಲು ತೊಳೆ'' ಎಂದರು. ಆಗ ಅವಳು ಕಾಲು ತೊಳೆದಳು.

ಜಯರಾಮಬಾಟಿಯಲ್ಲಿ ಒಂದು ದಿನ ಒಬ್ಬ ಮುಸಲ್ಮಾನ ಕೆಲಸದಾಳು ಜಗಲಿಯಲ್ಲಿ ಊಟಕ್ಕೆ ಕುಳಿತಿದ್ದ. ೧೯೦೫-೦೬ನೇ ಇಸವಿಯಲ್ಲಿ ಹಳ್ಳಿಯ ಸಾಂಪ್ರದಾಯಿಕ ಬ್ರಾಹ್ಮಣ ಮನೆತನದ ವಿಚಾರ ಹೇಳುತ್ತಿದ್ದೇನೆ. ಪ್ರಸನ್ನ ಮಾವನ (ಶ್ರೀಮಾತೆಯವರ ತಮ್ಮ, ಪ್ರಸನ್ನ ಕುಮಾರ) ಮಗಳು ನಳಿನಿ ಪಡಸಾಲೆಯಿಂದ ಬಂದು, ಆ ಕೆಲಸದವನಿಗೆ ಆಹಾರವನ್ನು ದೂರದಿಂದ ಎಸೆದು ನೀಡುತ್ತಿದ್ದಳು. ಆಗ ಶ್ರೀಮಾತೆ ಏನೋ ಕೆಲಸದಲ್ಲಿ ಮಗ್ನರಾಗಿದ್ದರು; ನಳಿನಿ ಮಾಡುತ್ತಿದ್ದುದು ಅವರ ಗಮನಕ್ಕೆ ಬಂದ ಕೂಡಲೇ ಅವರು, ''ಅದೇನಮ್ಮಾ?'' ಎಂದು ಹೇಳಿ, ನಳಿನಿಯ ಕೈಯಿಂದ ಆಹಾರದ ತಟ್ಟೆಯನ್ನು ಸೆಳೆದುಕೊಂಡರು. ಕೆಲಸದವನ ಬಳಿ ಕುಳಿತು, ''ತಿನ್ನು, ಮಗೂ'' ಎನ್ನುತ್ತ ಆದರದಿಂದ ಅವನಿಗೆ ಬಡಿಸಿದರು. ಅನಂತರ ಎಂಜಲನ್ನೆಲ್ಲ ತೆಗೆದು, ಶ್ರೀಮಾತೆ ಸೆಗಣಿ, ನೀರು ಹಾಕಿ ಸ್ವಚ್ಛಗೊಳಿಸುತ್ತಿರಬೇಕಾದರೆ, ನಳಿನಿ ಹೇಳಿದಳು, ''ಅತ್ತೆ ನಿನ್ನ ಜಾತಿ ಹೊರಟುಹೋಗುವುದು.'' ಆಗ ಶ್ರೀಮಾತೆ, ''ಮಕ್ಕಳ ಎಂಜಲನ್ನು ಬಳಿದು ಶುದ್ಧಗೊಳಿಸಿದರೆ ಹೋಗುವುದಲ್ಲವೆ?'' ಎಂದರು.

ನಿವೇದಿತಾ ಯೂರೋಪಿನ ಮಹಿಳೆಯಾಗಿದ್ದಳು; ಶ್ರೀಮಾತೆಯವರಿಗೆ ಅವಳ ಭಾಷೆ ಬರುತ್ತಿರಲಿಲ್ಲ. ಆದರೂ ಅವರು ಅವಳೊಂದಿಗೆ ಕುಳಿತು ಊಟ ಮಾಡುತ್ತಿದ್ದರು. ಅವರಲ್ಲಿ ಅದೆಂತಹ ಉದಾರತೆಯಿತ್ತು! ಇದನ್ನೆಲ್ಲ ಆಲೋಚಿಸಿದರೆ, ಶ್ರೀಮಾತೆಯವರ ಪ್ರೀತಿ ಎಷ್ಟೊಂದು ಅದ್ಭುತವಾಗಿತ್ತು ಎಂಬುದು ಅರ್ಥವಾಗುತ್ತದೆ. ಇಂತಹ ಪ್ರೀತಿಯನ್ನು ನೀಡಿದ್ದರಿಂದಲೇ ಅವರು 'ಎಲ್ಲರ ತಾಯಿ'ಯಾದರು.

೧೯೧೧ರಲ್ಲಿ ದಕ್ಷಿಣಭಾರತಕ್ಕೆ ಪ್ರವಾಸ ಹೋದ ಶ್ರೀಮಾತೆಯವರು ಬೆಂಗಳೂರಿನಲ್ಲಿ ಒಂದು ವಾರ ತಂಗಿದ್ದರು. ಆ ದಿನಗಳ ವಿಷಯ ಸರಿಸುಮಾರಾಗಿ ನನಗಾಗುತ್ತಿದೆ. ಆಗಿನ್ನೂ ಶ್ರೀರಾಮಕೃಷ್ಣರ ಭಾವಧಾರೆ ಹೆಚ್ಚು ಪ್ರಚಾರವಾಗಿರಲಿಲ್ಲ. ಆಶ್ರಮವನ್ನು ನೋಡಲು ಶ್ರೀಮಾತೆ ಅಲ್ಲಿಗೆ ಹೋಗಿದ್ದರು. ಈ ವಿಷಯ ಎಲ್ಲೆಡೆ ಹರಡಿತ್ತು. ಅವರು ಅಲ್ಲಿ ತಂಗಿದ್ದ ಏಳು ದಿನವೂ ಮೈಸೂರು ರಾಜ್ಯದ ದಿವಾನರಿಂದ ಹಿಡಿದು ದಟ್ಟದರಿದ್ರರ, ದುಃಖಿತರವರೆಗೂ, ಎಷ್ಟೊಂದು ಜನರು ಆಶ್ರಮಕ್ಕೆ ಬಂದರೋ ಅದಕ್ಕೆ ಲೆಕ್ಕವಿಲ್ಲ. ಆಶ್ರಮದ ಸಣ್ಣ ವಠಾರವೆಲ್ಲ ಶ್ರೀಮಾತೆಯವರ ದರ್ಶನ ಪಡೆಯಲು ಬಂದವರಿಂದ ತುಂಬಿಹೋಗಿತ್ತು. ಶ್ರೀಮಾತೆಯವರ ಆಕರ್ಷಣೆ ಅಂತಹುದಾಗಿತ್ತು. ಅವರು ಒಂದು ಕೋಣೆಯೊಳಗೆ ಸುಮ್ಮನೆ ಕುಳಿತಿರುತ್ತಿದ್ದರು, ನಡುನಡುವೆ ತುಸು ನಗುತ್ತಿದ್ದರು. ಆ ಪ್ರಾಂತದ ಭಾಷೆ ತಿಳಿದಿಲ್ಲವೆಂದು ಅವರು ಬಹಳ ಚಿಂತಿತರಾಗಿದ್ದರು.

ಬೆಂಗಳೂರಿನಲ್ಲಿದ್ದಾಗ ಒಂದು ದಿನ ಮಧ್ಯಾಹ್ನ ಎರಡೂವರೆ-ಮೂರು ಗಂಟೆಯ ವೇಳೆಗೆ ಫಿಟನ್‌ನಲ್ಲಿ (ತೆರೆದ ಗಾಡಿ) ಶ್ರೀಮಾತೆಯವರನ್ನು ಸುತ್ತಾಡಿಸಲು ಕರೆದುಕೊಂಡು ಹೋಗಿದ್ದೆ. ಆಗ ಆಶ್ರಮದಲ್ಲಿ ಹೆಚ್ಚು ಜನರಿರಲಿಲ್ಲ. ಸಮೀಪದ ಗವಿಪುರಂ ಗುಹಾಮಂದಿರದ ದರ್ಶನ ಮಾಡಿಕೊಂಡು ನಾವು ಆಶ್ರಮಕ್ಕೆ ಮರಳಿದಾಗ, ಅಲ್ಲಿ ಜನರು ಕಿಕ್ಕಿರಿದು ನೆರೆದಿದ್ದರು. ನಾನು ಶ್ರೀಮಾತೆಯವರಿಗೆ, ''ನೋಡಿ, ಎಷ್ಟೊಂದು ಜನರು ದರ್ಶನಕ್ಕಾಗಿ ಬಂದಿದ್ದಾರೆ'' ಎಂದೆ. ಶ್ರೀಮಾತೆ ಗಾಡಿಯಿಂದ ಇಳಿದರು. ಅವರ ಕಾಲುಗಳಲ್ಲಿ ಸಂಧಿವಾತವಿದ್ದುದರಿಂದ, ಅವರು ತುಸು ಕುಂಟುತ್ತಾ ನಡೆದರು. ಶ್ರೀಮಾತೆಯವರನ್ನು ಕಂಡು ಜನರು,

ದಕ್ಷಿಣ ಪ್ರಾಂತದಲ್ಲಿ ಪ್ರಚಲಿತವಿದ್ದಂತೆ ಅವರನ್ನೇ ಅನುಸರಿಸುತ್ತ, ಸಾಷ್ಟಾಂಗ ಪ್ರಣಾಮ ಮಾಡಿದರು. ಶ್ರೀಮಾತೆಯವರು ಅಲ್ಲೇ ಸಮಾಧಿಸ್ಥರಾಗಿ ವರ-ಅಭಯ ಹಸ್ತಗಳನ್ನು ಸೂಚಿಸುವ ಮೂರ್ತಿಯಾಗಿ ನಿಂತುಬಿಟ್ಟರು. ಆಗ ಅವರಿಗೆ ಬಾಹ್ಯಜ್ಞಾನವಿರಲಿಲ್ಲ. ಬಿದ್ದುಬಿಟ್ಟರೇನು ಗತಿ ಎಂದು ನನಗೆ ಭಯವಾಯಿತು. ಅಂದು ಅವರು ಎಲ್ಲರಿಗೂ ಹೃದಯತುಂಬಿ ಬರುವಷ್ಟು ಕೃಪೆಯನ್ನು ಹರಿಸಿದರು. ಶ್ರೀಮಾತೆಯವರಿಗೆ ಬಾಹ್ಯಜ್ಞಾನ ಬಂದಾಗ, ದರ್ಶನಕ್ಕಾಗಿ ಬಂದವರೆಲ್ಲರೂ ಆನಂದದಿಂದ ಹೊರಟುಹೋದರು. ಯಾರೋ ಒಬ್ಬರೆಂದರು, ''ಇವರು ಸಾಕ್ಷಾತ್ ದೇವಿ, ನಮ್ಮ ನಿಜವಾದ ತಾಯಿ.''

ಧಾರ್ಮಿಕ ಜಗತ್ತಿನಲ್ಲಿ ಸ್ತ್ರೀ ಒಂದು ರಹಸ್ಯವಾಗಿದ್ದಾಳೆ. ಭಗವಾನ್ ಬುದ್ಧ, ಶ್ರೀಚೈತನ್ಯ ಮಹಾಪ್ರಭು, ಆಚಾರ್ಯ ಶಂಕರ ಮುಂತಾದ ಅವತಾರ ಪುರುಷರ ಜೀವನದಲ್ಲಿ ಸ್ತ್ರೀಗೆ ಸ್ಥಾನವಿರಲಿಲ್ಲ. ಸ್ತ್ರೀಯನ್ನು ತ್ಯಜಿಸದೆ ಪರಮಾರ್ಥಲಾಭವುಂಟಾಗದು — ಇದು ಅವರ ಭಾವನೆಯಾಗಿತ್ತು. ಶಿವನ ಅವತಾರವಾಗಿದ್ದ ಶಂಕರರರು ಹೇಳುತ್ತಾರೆ: ''ನರಕದ ದ್ವಾರ ಯಾವುದು?-ನಾರಿ'' ಎಂದು. ಸಂತ ತುಳಸೀದಾಸರು ತಮ್ಮ ದೋಹೆ(ಹಾಡು)ಯಲ್ಲಿ ನಾರಿಯನ್ನು 'ದಿನ್ ಕಾ ಮೋಹಿನಿ, ರಾತ್ ಕಾ ಬಾಘಿನೀ'' (ಹಗಲು ಹೊತ್ತು ಆಕೆ ಮೋಹಿನಿ, ರಾತ್ರಿ ಹೊತ್ತು ಆಕೆ ಹೆಬ್ಬುಲಿ)' ಎಂದು ಹೇಳುತ್ತಾರೆ. ಆದರೆ ಶ್ರೀರಾಮಕೃಷ್ಣರ ಅವತಾರದಲ್ಲಿ ಈ ರೀತಿಯಾಗಿಲ್ಲ. ಅವರಿಗೋಸ್ಕರ ಕನ್ಯೆಯನ್ನು ಹುಡುಕುತ್ತಿದ್ದಾಗ ಅವರು ತಾವಾಗಿಯೇ ಹೇಳಿದ್ದರು, ''ಜಯರಾಮಬಾಟಿಯಲ್ಲಿ ರಾಮ ಮುಖರ್ಜಿಯ ಮನೆಯಲ್ಲಿ ಒಬ್ಬಳು ಕನ್ಯೆ ನನಗಾಗಿ ಮೀಸಲು ಇದ್ದಾಳೆ.'' ಶ್ರೀಮಾತೆಯವರೇ ಆ 'ಮೀಸಲು' ಕನ್ಯೆ. ಅವರೇ ಸಾಕ್ಷಾತ್ ಜಗನ್ಮಾತೆ. ಶ್ರೀರಾಮಕೃಷ್ಣರು ಬೇರೆ ಯಾರನ್ನೂ ಸ್ವೀಕರಿಸಲಿಲ್ಲ. ಕಾದಿರಿಸಿದ್ದ ಕನ್ಯೆಯನ್ನು ವರಿಸಿ, ಸಂಸಾರವೆಂಬ ರಂಗಮಂಚದಲ್ಲಿ ಅವರು ಎಂಥ ಅದ್ಭುತವಾದ ಲೀಲೆಯನ್ನು, ಎಂಥ ಪಾವಿತ್ರ್ಯದ ಅಭಿನಯವನ್ನು ಮಾಡಿ ತೋರಿಸಿದರೋ, ಅದು ಪ್ರಪಂಚದ ಇತಿಹಾಸದಲ್ಲೇ ಬೇರೊಂದಿಲ್ಲ.

ಕೌರವರ ಆಸ್ಥಾನದಲ್ಲಿ ದ್ರೌಪದಿಗೆ ಅಪಮಾನವುಂಟಾದಾಗ ಯುಧಿಷ್ಠಿರನು ಸತ್ಯಕ್ಕೆ ಕಟ್ಟುಬಿದ್ದನು; ಆದ್ದರಿಂದ ಪಾಂಡವರು ನಿಷ್ಕ್ರಿಯರಾಗಿದ್ದರು. ಸ್ತ್ರೀಯ ವೇದನೆಯನ್ನು ಕಂಡ ಭಗವಾನ್ ಶ್ರೀಕೃಷ್ಣನ ಹೃದಯ ಹೊತ್ತಿ ಉರಿದಿತ್ತು. ದುರ್ಗಾಸಪ್ತಶತೀ ಹೇಳುತ್ತದೆ: ''ಸ್ತ್ರಿಯಃ ಸಮಸ್ತಾಃ ಸಕಲಾ ಜಗತ್ಸು'' *(ಅಧ್ಯಾಯ ೧೧.೬)* ಸ್ತ್ರೀಯರ ಉದ್ಧಾರವಾಗದೆ ದೇಶದ ಏಳಿಗೆಯಾಗದು ಎಂಬುದನ್ನು ಶ್ರೀರಾಮಕೃಷ್ಣರು ಹಾಗೂ ಸ್ವಾಮೀಜಿ ಸ್ಪಷ್ಟವಾಗಿ ಕಂಡುಕೊಂಡಿದ್ದರು. ಸ್ತ್ರೀಯರಿಗಾಗಿ ಒಂದು ಮಠವನ್ನು ಸ್ಥಾಪಿಸಬೇಕೆಂಬ ಕಲ್ಪನೆ ನಿಜವಾಗಿಯೂ ಸ್ವಾಮೀಜಿಯವರಿಗಿತ್ತು. ಶ್ರೀಮಾತೆಯವರನ್ನು ಕೇಂದ್ರಬಿಂದುವಾಗಿಟ್ಟುಕೊಂಡು, ಗಂಗಾನದಿಯ ಪೂರ್ವಭಾಗದ ತೀರದಲ್ಲಿ, ಸ್ವಾಮೀಜಿಯವರ ಕನಸಿಗೆ ಅನುಗುಣವಾಗಿ ಇಂದು ಸ್ತ್ರೀಯರಿಗಾಗಿ ಒಂದು ಮಠವು ಸಾಕಾರಗೊಳ್ಳುತ್ತಿದೆ. ಸಂನ್ಯಾಸಿನಿಯರು ವಾಸಿಸುತ್ತಾರೆ. ಅಲ್ಲದೆ ಅದರ ಕಾರ್ಯನಿರ್ವಹಣೆಯಲ್ಲಿ ಬೇಲೂರು ಮಠದ ಪಾತ್ರವೇನೂ ಇರುವುದಲ್ಲ.[೧]

ಒಂದು ಅಮಾವಾಸ್ಯೆಯ ದಿನದಂದು ಶ್ರೀರಾಮಕೃಷ್ಣರು ಶ್ರೀಮಾತೆಯವರನ್ನು 'ಷೋಡಶೀ' ಎಂಬ ಭಾವದಿಂದ ಪೂಜಿಸಿದರು; ಈ ಮೂಲಕ ಅವರು ಬ್ರಹ್ಮಕುಂಡಲಿನಿಯನ್ನು ಜಾಗೃತಗೊಳಿಸಿದರು. ಭಾರತದಲ್ಲಿ ಮತ್ತೆ ಮೈತ್ರೇಯೀ, ಗಾರ್ಗಿಯರ ಆವಿರ್ಭಾವವುಂಟಾಗುವುದು. ಇಡೀ ಸ್ತ್ರೀ ಜಾತಿಯ ಅಂತರ್ಯದಲ್ಲಿ ಮಾತೃಭಾವದ ಜಾಗೃತಿಯುಂಟಾಗುವುದು — ಇದೇ ಷೋಡಶೀಪೂಜೆಯ ಅಂತರಾರ್ಥ.

ಇದು ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆಯವರ ಯುಗ. ನಾವು ಈ ಭಾವನೆಯನ್ನು ಹೊತ್ತುಕೊಂಡೇ ಜೀವನವನ್ನು ಸಾಗಿಸಬೇಕು. ಶ್ರೀಮಾತೆಯವರೇನೂ ಸಣ್ಣ ಮಟ್ಟಿನ ಸಂಸಾರಿಯಾಗಿರಲಿಲ್ಲ! ಸಂಸಾರದಲ್ಲಿ ಇದ್ದುಕೊಂಡೇ ಅವರನ್ನು ಆದರ್ಶವನ್ನಾಗಿ ಇಟ್ಟುಕೊಂಡು, ಹೆಣ್ಣುಮಕ್ಕಳ ಆಧ್ಯಾತ್ಮಿಕ ಉನ್ನತಿಗಾಗಿ ಶ್ರಮಿಸಬೇಕಾಗಿದೆ.

ಶ್ರೀಮಾತೆಯವರ ಒಂದು ಉಪದೇಶವನ್ನು ನಾವು ಪ್ರತಿದಿನವೂ ನೆನೆಯುತ್ತೇನೆ. ತಮ್ಮ ಲೀಲೆಯನ್ನು ಅಂತ್ಯಗೊಳಿಸುವುದಕ್ಕೆ ನಾಲ್ಕು-ಐದು ದಿನಗಳಿಗೆ ಮೊದಲು, ಶ್ರೀಮಾತೆಯವರು ಅನ್ನಪೂರ್ಣ ಎಂಬ, ಮಾತೃವಿಯೋಗದಿಂದ ಶೋಕಗ್ರಸ್ತಳಾಗಿದ್ದ ಮಹಿಳೆಗೆ ಹೇಳಿದ್ದರು: ''ನೋಡಮ್ಮಾ, ನಿನಗೆ ಶಾಂತಿ ಬೇಕಿದ್ದರೆ ಯಾರ ದೋಷವನ್ನೂ ನೋಡಬೇಡ. ನಿನ್ನ ದೋಷವನ್ನೇ ನೀನು ನೋಡಿಕೋ. ಜಗತ್ತಿನ ಎಲ್ಲರನ್ನೂ ನಿನ್ನವರನ್ನಾಗಿ ಮಾಡಿಕೊಳ್ಳಲು ಕಲಿ. ಯಾರೂ ಅನ್ಯರಲ್ಲ ; ಎಲ್ಲರೂ ನಿನ್ನವರೇ ನೋಡಮ್ಮಾ.'' ಬೇವಿನ ಮರದ ಪ್ರತಿಯೊಂದು ವಸ್ತುವೂ ಕಹಿಯೇ. ಆದರೆ ಜೇನುಹುಳ ಬೇವಿನ ಮರದಿಂದಲೂ ಒಂದಿಷ್ಟು ಮಕರಂದ ಹೀರಿಕೊಂಡೊಯ್ಯುವುದು. ಅದೇ ರೀತಿ, ಪ್ರಪಂಚದಲ್ಲಿ ವಿಭಿನ್ನ ಸ್ವಭಾವದ ಜನರಿರುತ್ತಾರೆ; ಆದರೆ ಎಲ್ಲರೂ ಶ್ರೀಮಾತೆಯವರಿಗೆ ಮಕ್ಕಳೇ. ಎಲ್ಲರಲ್ಲೂ ಒಂದೇ ಭಗವಂತನ ಸತ್ವವು ಇರುತ್ತದೆ ಎಂದು ಭಾವಿಸಿ, ಎಲ್ಲರನ್ನೂ ನಮ್ಮವರೆಂದೇ ಭಾವಿಸಬೇಕು.

ಶ್ರೀಮಾತೆಯವರ ಈ ಅಂತಿಮ ಸಂದೇಶವನ್ನು ಪಾಲಿಸಿದರೆ, ನಮ್ಮ ಜೀವನವು ಜೇನಿನಂತೆ ಮಧುರವಾಗುವುದು[೨].

*(ಸಂಗ್ರಹ: ಸ್ವಾಮಿ ಚೇತನಾನಂದ)*

---

೧ ದಕ್ಷಿಣೇಶ್ವರದ ಗಂಗಾತೀರದಲ್ಲಿ ೧೯೫೪ರ ಡಿಸೆಂಬರ್ ೨ ರಂದು ಶ್ರೀ ಶಾರದಾ ಮಠವು ಸ್ಥಾಪಿತವಾಯಿತು. ರಾಮಕೃಷ್ಣ ಮಠ-ಮಿಷನ್ನಿನ ಅಧ್ಯಕ್ಷರಾದ ಸ್ವಾಮಿ ಶಂಕರಾನಂದರು ಅದನ್ನು ಉದ್ಘಾಟಿಸಿದರು. *(-ಸಂ.)*

೨ ೧೯೫೪ರ ಏಪ್ರಿಲ್ ೧೧ರಂದು ಶ್ರೀರಾಮಕೃಷ್ಣ ಮಠ, ಮಾಲ್ದಾ (ಪ.ಬಂಗಾಳ) ದಲ್ಲಿ ಪೂಜ್ಯ ಸ್ವಾಮೀಜಿಯವರು ನೀಡಿದ ಭಾಷಣದ ಲೇಖನ ರೂಪವಿದು. ಬಂಗಾಳಿ ಮಾಸಪತ್ರಿಕೆ 'ಉದ್ಬೋಧನ'ದಲ್ಲಿ ಇದು ಪ್ರಕಟವಾಗಿದೆ.